# ವಾರ್ಡ್ ಸಭೆ ಸಂಖ್ಯೆ.15

ದಿನಾಂಕ: 07.08.2021 ರಂದು ಸಮಯ ಬೆಳಿಗ್ಗೆ 11:00 ಗಂಟೆಗೆ ವಾರ್ಡ್.ಸಂಖ್ಯೆ.44 ಮಾರಪ್ಪನಪಾಳ್ಯ ವಾರ್ಡ್ ಕಛೇರಿಯಲ್ಲಿ ವಾರ್ಡ್ ಕಮಿಟಿ ಸಭೆಯನ್ನು ಮಾನ್ಯ ವಾರ್ಡ್ ಅಭಿಯಂತರರು (ಕಾರ್ಯದರ್ಶಿಗಳು) ಅಧ್ಯಕ್ಷತೆಯಲ್ಲಿ ಕರೆಯಲಾಯಿತು.

## ಹಾಜರಿದ್ದ ಸದಸ್ಯರು ಮತ್ತು ಅಧಿಕಾರಿಗಳು

1. ಶ್ರೀ. ಧನಂಜಯ ಜಿ.ಟಿ ಸಹಾಯಕ ಅಭಿಯಂತರರು, ವಾರ್ಡ್.ಸಂಖ್ಯೆ.44, ಮಾರಪ್ಪನಪಾಳ್ಯ. (ಕಾರ್ಯದರ್ಶಿ)
2. ಶ್ರೀ ವೈ.ಆರ್ ವೆಂಕಟೇಶ್ ಸದಸ್ಯರು.
3. ಶ್ರೀಮತಿ ಪ್ರೇಮ ಸದಸ್ಯರು.
4. ಕುಮಾರಿ ಕಮಲ ಸದಸ್ಯರು.
5. ಶ್ರೀ ನಂಜೇಗೌಡ ಬಿ.ವಿ ಸದಸ್ಯರು.
6. ಶ್ರೀ ರಾಜೇಶ್ ಸದಸ್ಯರು.
7. ಶ್ರೀ ಬಿ.ಆರ್ ಪುಟ್ಟಸ್ವಾಮಿ ಸದಸ್ಯರು.
8. ಶ್ರೀ ನಾಗೇಂದ್ರ ಸದಸ್ಯರು.
9. ಶ್ರೀ ಗೋಪಿ ಸದಸ್ಯರು.
10. ಶ್ರೀಮತಿ ಮಮತ ಆರೋಗ್ಯ ವೈದ್ಯಾಧಿಕಾರಿಗಳು, ಶಂಕರನಗರ ಪ್ರಾಥಮಿಕ ಆರೋಗ್ಯ ಕೇಂದ್ರ
11. ಶ್ರೀ ವೆಂಕಟೇಶ್ ಹಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್.ಸಂಖ್ಯೆ.44, ಮಾರಪ್ಪನಪಾಳ್ಯ.
12. ಶ್ರೀ ಛಾಯಾಪತಿ ಎಂ ಕಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್ ಸಂಖ್ಯೆ.44 ಮಾರಪ್ಪನಪಾಳ್ಯ.
13. ಶ್ರೀ ಜಿ.ಕೆ ವೆಂಕಟೇಶಯ್ಯ ಕೆಲಸ ಪರಿವೀಕ್ಷಕರು, ವಾರ್ಡ್ ಸಂಖ್ಯೆ.44, ಮಾರಪ್ಪನಪಾಳ್ಯ
14. ಶ್ರೀ ರಾಜೇಶ್ ವಿ ಕಿರಿಯ ಅಭಿಯಂತರರು, ವಾರ್ಡ್ ಸಂಖ್ಯೆ.44, ಮಾರಪ್ಪನಪಾಳ್ಯ.
15. ಶ್ರೀ ನಿಂಗರಾಜು ಎನ್ ಕಂದಾಯ ಪರಿವೀಕ್ಷಕರು, ವಾರ್ಡ್ ಸಂಖ್ಯೆ.44 ಮಾರಪ್ಪನಪಾಳ್ಯ.
16. ಶ್ರೀ ಗಂಗಾಧರ ಚಾರಿ ಜೆ ಮಾರ್ಷಲ್ ವಾರ್ಡ್.ಸಂಖ್ಯೆ.44, ಮಾರಪ್ಪನಪಾಳ್ಯ.

ಶ್ರೀ ಧನಂಜಯ ಜಿ.ಟಿ ಕಾರ್ಯದರ್ಶಿಗಳು ಸಭೆಯಲ್ಲಿ ಹಾಜರಿದ್ದ ಸದಸ್ಯರನ್ನು, ಅಧಿಕಾರಿಗಳನ್ನು ಹಾಗೂ ಸಾರ್ವಜನಿಕರನ್ನು ಸಭೆಗೆ ಸ್ವಾಗತಿಸಲಾಯಿತು.

| ಕ್ರ.ಸಂ | ವಿವರಣೆ | ಕ್ರಮ |
|---|---|---|
| 1 | ಕಾರ್ಯದರ್ಶಿಗಳು ಹಿಂದಿನ ಸಭೆಯ ನಡವಳಿಗಳನ್ನು ಸಭೆಯಲ್ಲಿ ಹಾಜರಿದ್ದ ಸದಸ್ಯರಿಗೆ, ಅಧಿಕಾರಿಗಳಿಗೆ ಓದಿ ತಿಳಿಸಿದರು. | – |
| 2 | ಕಾರ್ಯದರ್ಶಿಗಳು ಸಾರ್ವಜನಿಕರ ಸಮಸ್ಯೆಗಳಿಗೆ ಮೊದಲ ಆದ್ಯತೆ ನೀಡಿ ಸಮಸ್ಯೆಯನ್ನು ತಿಳಿಸುವಂತೆ ಸಾರ್ವಜನಿಕರನ್ನು ಕೋರಿದರ | – |
| 3 | ಸಭೆಯಲ್ಲಿ ಹಾಜರಿದ್ದ ಸದಸ್ಯರು ಹಾಗೂ ಸಾರ್ವಜನಿಕರು ಕೋವಿಡ್ ಬಗ್ಗೆ ಮಾಹಿತಿ ಕೋರಿದರು, ಇದಕ್ಕೆ ವೈದ್ಯಾಧಿಕಾರಿಗಳು ರವರು ಮಾಹಿತಿ ತಿಳಿಸಿದರು. | – |
| 4 | ಸಾರ್ವಜನಿಕರು ಶಂಕರನಗರ ಮುಖ್ಯರಸ್ತೆಯಲ್ಲಿ ಚರಂಡಿಗಳು, ಪಾದಾಚಾರಿ ಮಾರ್ಗಗಳು ಹಾಳಾಗಿರುತ್ತವೆ ಹಾಗೂ ಸದರಿ ಮುಖ್ಯರಸ್ತೆಯನ್ನು ಅಭಿವೃದ್ಧಿ ಪಡಿಸುವಂತೆ ಸಭೆಯಲ್ಲಿ ತಿಳಿಸಿದರು ಇದಕ್ಕೆ ವಾರ್ಡ್ ಅಭಿಯಂತರರು, ಸದರಿ ರಸ್ತೆಗೆ ಡಾಂಬರು ಅಳವಡಿಸಿದ್ದು, ಚರಂಡಿ ನಿರ್ಮಾಣ ಮಾಡಲು ಈಗಾಗಲೇ ಅಂದಾಜು ಪಟ್ಟಿಯನ್ನು ತಯಾರಿಸಲಾಗಿದೆ ಎಂದು ತಿಳಿಸಿದರು. | ವಾರ್ಡ್ ಅಭಿಯಂತರರು ವಾರ್ಡ್ ಸಂಖ್ಯೆ.44 ಮಾರಪ್ಪನಪಾಳ್ಯ |
| 5 | ಸಾರ್ವಜನಿಕರು ಶಂಕರನಗರದಲ್ಲಿ ಮನೆಯ ಮೇಲೆ ಬಂದಿರುವ ಮರದ ರೆಂಬೆಗಳನ್ನು ತೆಗೆಯಲು ಮನವಿ ಮಾಡಿಕೊಂಡರು. ಇದಕ್ಕೆ ಕಾರ್ಯದರ್ಶಿಗಳು ಸಮಸ್ಯೆಯನ್ನು ಪರಿಹರಿಸಲು ಸೂಚಿಸಲಾಗುವುದು ಎಂದು ತಿಳಿಸಿದರು. | ಅರಣ್ಯ ಇಲಾಖೆ |

Scanned with CamScanner

| | | |
|---|---|---|
| 6 | ಸದಸ್ಯರು ವಾರ್ಡ್ ವ್ಯಾಪ್ತಿಯಲ್ಲಿ ಲಸಿಕೆ ನೀಡಿರುವ ಮಾಹಿತಿ ಕೋರಿದರು. ಇದಕ್ಕೆ ಸಭೆಯಲ್ಲಿ ಹಾಜರಿದ್ದ ವೈದ್ಯಾಧಿಕಾರಿಗಳು ಮಾಹಿತಿ ತಿಳಿಸಿದರು ಹಾಗೂ ಲಸಿಕೆ ಕೊರತೆ ಇದೆ ಎಂದು ತಿಳಿಸಿದರು. ಇದಕ್ಕೆ ಸಭೆಯಲ್ಲಿ ಹಾಜರಿದ್ದ ಸದಸ್ಯರು ನಮ್ಮ ವಾರ್ಡ್ ವ್ಯಾಪ್ತಿಗೆ ಕಡಿಮೆ ಲಸಿಕೆ ಸರಬರಾಜು ಆಗುತ್ತಿರುವುದಕ್ಕೆ ಕರಾಣ ಕೇಳಿದರು. ಇದಕ್ಕೆ ವೈದ್ಯಾಧಿಕಾರಿಗಳು ಎಂ.ಓ.ಎಚ್ ರವರನ್ನು ಕೇಳಬೇಕು ಎಂದು ತಿಳಿಸಿದರು. ಇದಕ್ಕೆ ಸದಸ್ಯರು ಹಾಗೂ ಸಾರ್ವಜನಿಕರು ಮಾನ್ಯ ಸಚಿವರಲ್ಲಿ ಕನಿಷ್ಟ 200 ಲಸಿಕೆ ಪೂರೈಸುವಂತೆ ಮನವಿ ಮಾಡಲು ತೀರ್ಮಾನಿಸಿದರು. | ಎಂ.ಓ.ಎಚ್, ಮಾನ್ಯ ಶ್ರೀ. ಕೆ. ಗೋಪಾಲಯ್ಯ, ಅಬಕಾರಿ ಸಚಿವರು ಹಾಗೂ ಸ್ಥಳೀಯ ಶಾಸಕರು ರವರ ಆದ್ಯಾ ಗಮನಕ್ಕೆ |
| 7 | ಸಭೆಯಲ್ಲಿ ಹಾಜರಿದ್ದ ಸದಸ್ಯರು ಹಾಗೂ ಸ್ಥಳೀಯ ಮುಖಂಡರಿಗೆ ಲಸಿಕೆ ಕೊಡಿಸುವಂತೆ ಸಾರ್ವಜನಿಕರು ಮನವಿ ಮಾಡಿಕೊಳ್ಳುತ್ತಿರುತ್ತಾರೆ. ಆದ್ದರಿಂದ ಲಸಿಕೆಯನ್ನು ಪ್ರತಿನಿತ್ಯ ಸ್ಥಳೀಯ ಮುಖಂಡರು ಸೂಚಿಸಿರುವ ಸ್ಥಳೀಯ ಸಾರ್ವಜನಿಕರಿಗೆ ಲಸಿಕೆ ನೀಡುವಂತೆ ಕೋರಿದರು. ಇದಕ್ಕೆ ವೈದ್ಯಾಧಿಕಾರಿಗಳು ಪ್ರತಿನಿತ್ಯ 200 ಲಸಿಕೆಗಳು ಕೊಡಿಸಲು ವ್ಯವಸ್ಥೆ ಮಾಡಿಸಿ, ಅದರಲ್ಲಿ 20 ಲಸಿಕೆಗಳು ಸ್ಥಳೀಯ ಮುಖಂಡರು ಸೂಚಿಸುವ ಸಾರ್ವಜನಿಕರಿಗೆ ನೀಡುತ್ತೇವೆ ಎಂದು ತಿಳಿಸಿದರು. | ಎಂ.ಓ.ಎಚ್, ಮಾನ್ಯ ಶ್ರೀ ಕೆ. ಗೋಪಾಲಯ್ಯ, ಅಬಕಾರಿ ಸಚಿವರು ಹಾಗೂ ಸ್ಥಳೀಯ ಶಾಸಕರು ರವರ ಆದ್ಯಾ ಗಮನಕ್ಕೆ |
| 8 | ವೈದ್ಯಾಧಿಕಾರಿಗಳು ಕೋವ್ಯಾಕ್ಸಿನ್ (2nd dose) ಕೊರತೆ ಇದೆ ಎಂದು ಸಭೆಗೆ ತಿಳಿಸಿದರು | ಎಂ.ಓ.ಎಚ್ |
| 9 | ವೈದ್ಯಾಧಿಕಾರಿಗಳು ಕೋವಿಡ್‌ನಿಂದ ಸುರಕ್ಷಿತವಾಗಿರಲು ಸಾಮಾಜಿಕ ಅಂತರ ಕಾಪಡಿಕೊಳ್ಳಬೇಕು, 15 ದಿನಗಳಿಗೆ ಕೋವಿಡ್ ಪರೀಕ್ಷೆ ಮಾಡಿಸಬೇಕು ಮತ್ತು ಲಸಿಕೆ ಪಡೆಯಬೇಕು ಎಂದು ತಿಳಿಸಿದರು. | – |
| 10 | ಸದಸ್ಯರು ವ್ಯಾರ್ಡ್ ವ್ಯಾಪ್ತಿಯಲ್ಲಿರುವ ಖಾಲಿ ನಿವೇಶನಗಳಲ್ಲಿ ಇರುವ ಗಿಡಗಂಟೆ ತೆಗೆಯುವ ಬಗ್ಗೆ ಸಭೆಗೆ ತಿಳಿಸಿದರು. ಇದಕ್ಕೆ ಕಂದಾಯ ಪರಿವೀಕ್ಷಕರು ರವರು ಕ್ರಮಕೈಗೊಳ್ಳಲಾಗುವುದು ಎಂದು ತಿಳಿಸಿದರು. | ಕಂದಾಯ ಪರಿವೀಕ್ಷಕರು |
| 11 | ಸದಸ್ಯರು ರವರು ವಾರ್ಡ್ ವ್ಯಾಪ್ತಿಯಲ್ಲಿ ಸಿಸಿ ಕ್ಯಾಮರಗಳು ಚಾಲ್ತಿಯಿರುವುದರ ಬಗ್ಗೆ ಮಾಹಿತಿ ಕೋರಿದರು. ಇದಕ್ಕೆ ಕಾರ್ಯದರ್ಶಿಗಳು ಸಿಸಿ ಕ್ಯಾಮರಗಳಿಗೆ ಕಲ್ಪಿಸಿರುವ ವಿದ್ಯುತ್ ಸಂಪರ್ಕವನ್ನು ಬೆಸ್ಕಾಂ ಅಧಿಕಾರಿಗಳು ಕಡಿತಗೊಳಿಸಿರುತ್ತಾರೆ. ಇದರಿಂದ ವಾರ್ಡ್‌ನಲ್ಲಿ ಅಪರಾದ ಕೃತ್ಯಗಳು ಹೆಚ್ಚುತ್ತಿರುವುದರಿಂದ ಸದರಿ ಸಂಪರ್ಕವನ್ನು ತುರ್ತಾಗಿ ಮರು ಜೋಡಿಸಲು ಬೆಸ್ಕಾಂ ಅಧಿಕಾರಿಗಳಿಗೆ ತಿಳಿಸಲಾಗಿರುತ್ತದೆ. | ಬೆಸ್ಕಾಂ ಅಧಿಕಾರಿಗಳು |
| 12 | ಶ್ರೀ ಗೋಪಿ ಸದಸ್ಯರು ರವರು ವಾರ್ಡ್ ವ್ಯಾಪ್ತಿಯಲ್ಲಿ ಬೆಸ್ಕಾಂ ಇಲಾಖೆ ರವರು ಕೇಬಲ್ ಅಳವಡಿಸಲು ರಸ್ತೆಗುಂಡಿಗಳನ್ನು ಅಗೆದು ತ್ಯಾಜ್ಯವನ್ನು ತೆರವುಗೊಳಿಸದೆ ಹಾಗೆಯೆ ಬಿಟ್ಟಿರುತ್ತಾರೆ ಎಂದು ತಿಳಿಸಿದರು. ಇದಕ್ಕೆ ಕಾರ್ಯದರ್ಶಿಗಳು ಬೆಸ್ಕಾಂ ಅಧಿಕಾರಿ ರವರಿಗೆ ಡೆಬ್ರೀಸ್ ತೆರವುಗೊಳಿಸಲು ಸೂಚಿಸಿದರು. ಬೆಸ್ಕಾಂ ಅಧಿಕಾರಿಗಳು ತೆರವುಗೊಳಿಸುತ್ತೇನೆ ಎಂದು ಸಭೆಗೆ ತಿಳಿಸಿದರು. | ಬೆಸ್ಕಾಂ ಅಧಿಕಾರಿಗಳು |
| 13 | ನಾಗೇಂದ್ರ ಸದಸ್ಯರು ರವರು ಮಾರ್ಷಲ್‌ಗಳು ಜನ ಸಂಧಣಿ ಇರುವ ಜಾಗದಲ್ಲಿ ಬಂದು ಸಾಮಾಜಿಕ ಅಂತರ ಹಾಗೂ ಮಾಸ್ಕ್ ಧರಿಸದೆ ಇರುವವರಿಗೆ ದಂಡವಿಧಿಸಲು ತಿಳಿಸಿದರು. | ಮಾರ್ಷಲ್ಸ್ |
| 14 | ಸಾರ್ವಜನಿಕರು ಕಾವೇರಿ ನೀರಿನ ಸರಬರಾಜು ಆಗುತ್ತಿಲ್ಲ ಎಂದು ತಿಳಿಸಿದರು. ಸಭೆಯಲ್ಲಿ ಬಿ.ಡಬ್ಲ್ಯೂ.ಎಸ್.ಎಸ್.ಬಿ ರವರು ಹಾಜರಿರದ ಕಾರಣ ಕಾರ್ಯದರ್ಶಿಗಳು ಸಂಬಂಧಪಟ್ಟ ಅಧಿಕಾರಿಗಳಿಗೆ ಸಮಸ್ಯೆಯನ್ನು ಪರಿಹರಿಸಲು ಸೂಚಿಸಲಾಗುವುದು ಎಂದು ತಿಳಿಸಿದರು | ಬಿ.ಡಬ್ಲ್ಯೂ.ಎಸ್.ಎಸ್.ಬಿ ಅಧಿಕಾರಿಗಳು |
| 15 | ಸಭೆಯಲ್ಲಿ ಹಾಜರಿದ್ದ ಸದಸ್ಯರು ದಿನಾಂಕ:12.07.2021 ರಂದು ನಡೆದ ಜನಸ್ಪಂದನಾ ಕಾರ್ಯಕ್ರಮದಲ್ಲಿ ಪೋಲೀಸ್ ಆಯುಕ್ತರು ಶಂಕರನಗರ ಮುಖ್ಯರಸ್ತೆ, ಎ.ಪಿ.ಎಂ.ಸಿ ಹಾಗೂ ಟಯೋಟ ಶೋರೂಂ ಹತ್ತಿರ ಸಾರ್ವಜನಿಕರು ವಾಹನಗಳನ್ನು ನಿಲ್ಲಿಸಿ ಹೋಗುತ್ತಿರುತ್ತಾರೆ ಇದರಿಂದ ಸಾರ್ವಜನಿಕರ ಪಾದಾಚಾರಿಗಳ ಹಾಗೂ ರಸ್ತೆಯಲ್ಲಿ ಸಂಚರಿಸುವ ವಾಹನಗಳಿಗೆ ಕಷ್ಟವಾಗುತ್ತಿರುತ್ತದೆ. ಆದುದರಿಂದ ಸೂಚನಾ ಫಲಕಗಳನ್ನು (ನೋ ಪಾರ್ಕಿಂಗ್ ಬೋರ್ಡ್) ಅಳವಡಿಸಿಬೇಕು. ಸೂಚನ ಫಲಕ ಅಳವಡಿಸದ ನಂತರವು ವಾಹನಗಳನ್ನು ನಿಲ್ಲಿಸಿದಲ್ಲಿ ದಂಡವಿಧಿಸಬೇಕು ಎಂದು ಒಕ್ಕೊರಲಾಗಿ ತೀರ್ಮಾನಿಸಲಾಯಿತು. | ಸ್ಥಳೀಯ ಪೋಲೀಸ್ ಠಾಣಾಧಿಕಾರಿಗಳು ಹಾಗೂ ಸಂಚಾರಿ ಪೋಲೀಸ್ ಠಾಣೆ ರಾಜಾಜಿನಗರ |
| 16 | ಸಭೆಯಲ್ಲಿ ಹಾಜರಿದ್ದ ಸದಸ್ಯರು ವಾರ್ಡ್ ಕಛೇರಿಯ ಹಿಂಭಾಗದಲ್ಲಿರುವ ದೊಡ್ಡ ಮೋರಿಯ ಮೇಲೆ ಗಾಂಜಾ ಸೇವನೆ ಮಾಡುವವರು ಪ್ರತಿನಿತ್ಯ ಸುಮಾರು 10-15 ಜನ ಗುಂಪು ಸೇರಿಕೊಂಡು ಗಾಂಜ ಸೇವನೆ ಮಾಡುತ್ತಿರುತ್ತಾರೆ. ಇದರಿಂದ ಹೆಂಗಸರು ಮತ್ತು ಮಕ್ಕಳು ಭಯಭೀತರಾಗಿ | ಸ್ಥಳೀಯ ಪೋಲೀಸ್ ಠಾಣಾಧಿಕಾರಿಗಳು |

Scanned with CamScanner

| | | |
|---|---|---|
| | ಓಡಾಡುವ ಪರಿಸ್ಥಿತಿ ವಿಜಯಾನಂದನಗರದಲ್ಲಿ (ದೊಡ್ಡಮೋರಿಗೆ ಹೊಂದಿಕೊಂಡಿರುವ ಪ್ರದೇಶ) ಸೃಷ್ಟಿಯಾಗಿದೆ, ಆದುದರಿಂದ ನಂದಿನ ಬಡಾವಣೆ ಪೋಲೀಸ್ ಠಾಣೆಯ ಅಧಿಕಾರಿಗಳು ಕೂಡಲೆ ಇದರ ಬಗ್ಗೆ ಕ್ರಮವಹಿಸಬೇಕೆಂದು ಸಭೆಯಲ್ಲಿ ತೀರ್ಮಾನಿಸಲಾಯಿತು. | |
| 17 | ಶ್ರೀ ಪುಟ್ಟಸ್ವಾಮಿ ಸದಸ್ಯರು ರವರು ಅಂತಿಮವಾಗಿ ಸಭೆಗೆ ಹಾಜರಿದ್ದ ಸದಸ್ಯರು, ಅಧಿಕಾರಿಗಳು ಮತ್ತು ಸಾರ್ವಜನಿಕರಿಗೆ ವಂದನೆಗಳು ಹೇಳುತ್ತಾ ಸಭೆಯನ್ನು ಮುಕ್ತಾಯಗೊಳಿಸಿದರು | - |

**ಕಾರ್ಯದರ್ಶಿಗಳು**

ವಾರ್ಡ್ ಕಮಿಟಿ, ವಾರ್ಡ್.ಸಂಖ್ಯೆ.44
ಮಾರಪ್ಪನಪಾಳ್ಯ

Scanned with CamScanner